ಪ್ರಜಾವಾಣಿ

Dated, Saturday, 17th June– 2017

Pg.No.05


## ಎಂಜಿನಿಯರಿಂಗ್ ಶುಲ್ಕ ₹1,000 ಮಾತ್ರ ಏರಿಕೆ

# ವೃತ್ತಿಪರ ಕೋರ್ಸ್‌ಗಳ ಶುಲ್ಕ ನಿಗದಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವೃತ್ತಿಪರ ಕೋರ್ಸ್‌ಗಳ ಪ್ರವೇಶ ಶುಲ್ಕವನ್ನು ಶುಕ್ರವಾರ ಪ್ರಕಟಿಸಲಾಗಿದ್ದು, ಎಂಜಿನಿಯರಿಂಗ್ ಶುಲ್ಕ ಕಳೆದ ವರ್ಷಕ್ಕಿಂತ ₹ 500ರಿಂದ ₹1,000 ಹೆಚ್ಚಳ ಆಗಿದೆ.

ಆದರೆ, ಬಿ.ಎಸ್ಸಿ ಕೃಷಿ ಶುಲ್ಕವನ್ನು ಹಿಂದಿನ ಬಾರಿಗಿಂತ ಶೇ 15ರಷ್ಟು ಮತ್ತು ಪಶು ವೈದ್ಯ ವಿಜ್ಞಾನ ಕೋರ್ಸ್ ಶುಲ್ಕವನ್ನು ಶೇ 40ರಷ್ಟು ಹೆಚ್ಚಳ ಮಾಡಲಾಗಿದೆ. ಬಿ-ಫಾರ್ಮಾ ಮತ್ತು ಫಾರ್ಮಾ-ಡಿ ಕೋರ್ಸ್‌ಗೆ ಕಳೆದ ವರ್ಷದಷ್ಟೇ ಶುಲ್ಕ ಇದೆ.

ಎಂಜಿನಿಯರಿಂಗ್‌ಗೆ ಕನಿಷ್ಠ ಶೇ 10ರಷ್ಟು ಶುಲ್ಕ ಹೆಚ್ಚಳ ಮಾಡುವಂತೆ ಖಾಸಗಿ ಕಾಲೇಜುಗಳು ಪಟ್ಟು ಹಿಡಿದಿದ್ದವು. ಆದರೆ, ಸರ್ಕಾರ ಕಾಲೇಜು ಆಡಳಿತ ಮಂಡಳಿ ಮನವೊಲಿಸಿ ಬಹುತೇಕ ಕಳೆದ ವರ್ಷದ ಶುಲ್ಕವೇ ಮುಂದುವರಿಯುವಂತೆ ನೋಡಿಕೊಂಡಿದೆ.

ಕಳೆದ ವರ್ಷ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳ ಎಂಜಿನಿಯರಿಂಗ್ ಶುಲ್ಕ (ಸಾಮಾನ್ಯ ವರ್ಗ) ₹ 18,090 ಇದ್ದದ್ದು, ಈ ಬಾರಿ ₹19,090ಕ್ಕೆ ಏರಿಕೆ ಆಗಿದೆ. ಖಾಸಗಿ ಕಾಲೇಜುಗಳ ಶುಲ್ಕ ₹49,500ರಿಂದ ₹50,500ಕ್ಕೆ ಹೆಚ್ಚಳ ಆಗಿದೆ.

**ವೃತ್ತಿಪರ ಕೋರ್ಸ್‌ಗಳ ಶುಲ್ಕ ವಿವರ** (₹ ಗಳಲ್ಲಿ)

| ಕೋರ್ಸ್ | ಕಾಲೇಜು | ಸಾಮಾನ್ಯ | ಇತರೆ ಹಿಂದುಳಿದ ವರ್ಗ |
|---|---|---|---|
| ಎಂಜಿನಿಯರಿಂಗ್/ ಆರ್ಕಿಟೆಕ್ಚರ್ | ಸರ್ಕಾರಿ/ಅನುದಾನಿತ | 19,090 | 19,090 |
| | ಖಾಸಗಿ ಮತ್ತು ಅಲ್ಪಸಂಖ್ಯಾತ (ಟೈಪ್-1) | 50,500 | 50,500 |
| | ಖಾಸಗಿ ಮತ್ತು ಅಲ್ಪಸಂಖ್ಯಾತ (ಟೈಪ್-2) | 56,000 | 56,000 |
| | ಡೀಮ್ಡ್/ಖಾಸಗಿ ವಿಶ್ವವಿದ್ಯಾಲಯ | 55,000 | 55,000 |
| ಬಿ-ಫಾರ್ಮಾ/ ಫಾರ್ಮಾ-ಡಿ | ಸರ್ಕಾರಿ | 14,030 | 14,030 |
| | ಖಾಸಗಿ | 21,430 | 21,430 |
| ಬಿಎಸ್ಸಿ | ಸರ್ಕಾರಿ | 23,150 | 23,150 |
| ಪಶು ವೈದ್ಯ ವಿಜ್ಞಾನ | ಸರ್ಕಾರಿ | 47,370 | 23,750 |

(ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಕೆಟಗೆರಿ-1 ವಿಭಾಗದ ವಿದ್ಯಾರ್ಥಿಗಳಿಗೆ ಆದಾಯ ಮಿತಿ ಆಧಾರದ ಮೇಲೆ ಬೇರೆ ಬೇರೆ ರೀತಿಯ ಶುಲ್ಕ ನಿಗದಿ ಮಾಡಲಾಗಿದೆ)

ಬಿಎಸ್ಸಿ (ಕೃಷಿ) ಶುಲ್ಕ ಕಳೆದ ಬಾರಿ ₹20,820 ಇದ್ದದ್ದು, ಈ ಬಾರಿ ₹23,150ಗೆ ಹೆಚ್ಚಳವಾಗಿದ್ದರೆ, ಪಶು ವೈದ್ಯ ವಿಜ್ಞಾನ ಶುಲ್ಕ ₹33,790ರಿಂದ ₹47,370ಕ್ಕೆ ಏರಿದೆ.

ಎರಡು ದಿನಗಳ ಹಿಂದೆ ಸೀಟು ಮ್ಯಾಟ್ರಿಕ್ಸ್ ಪ್ರಕಟಿಸಿದ್ದು, ಈಗ ಆಯ್ಕೆ ದಾಖಲು (ಆಪ್ಷನ್ ಎಂಟ್ರಿ) ನಡೆಯುತ್ತಿದೆ. ಇದೇ 25ರಂದು ಸೀಟು ಹಂಚಿಕೆ ಮಾಡಲಾಗುತ್ತದೆ.

ಅಂತರಗಂಗೆ



# ಆರ್.ಎಲ್. ಜಾಲಪ್ಪ ನಾರಾಯಣ ಹಾರ್ಟ್ ಸೆಂಟರ್‌ನಲ್ಲಿ ಆರೋಗ್ಯ ವಿಮೆ ಯೋಜನೆಗಳು ಆರಂಭ



ಕೋಲಾರ,ಜೂ.16– ನಗರದ ಆರ್.ಎಲ್.ಜಾಲಪ್ಪ ನಾರಾಯಣ ಹಾರ್ಟ್ ಸೆಂಟರ್‌ನಲ್ಲಿ ಹೃದಯ ಆರೈಕೆಯ ಸೇವೆಗಳ ವಿವಿಧ ಯೋಜನೆಗಳಿಗೆ ಮಾನ್ಯತೆ ನೀಡಿ ಪುನಃ ಆರಂಭಿಸಲಾಗಿದೆ ಎಂದು ಹೃದಯ ತಜ್ಞ ಡಾ.ನಿರಂಜನ್ ಕೆ.ರೆಡ್ಡಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಕೆಲಸ ತಂತ್ರಿಕ ಸಮಸ್ಯೆಗಳಿಂದ ಡಿಸೆಬಂರ್‌ನಿಂದ ಯೋಜನೆಗಳನ್ನು ಸ್ಥಗಿತಗೊಳಿಸಲಾಗಿತ್ತು, ಈಗಾ ಪುನಃ ಆರಂಭ ಮಾಡಲಾಗಿದ್ದು ಸಾರ್ವಜನಿಕರಿಗೆ ತಿಳಿಸಲು ಹರ್ಷದಾಯಕವಾಗಿದೆ ಎಂದರು.

ಹೃದಯ ಶಸ್ತ್ರ ಚಿಕಿತ್ಸೆ, ಆಂಜಿಯೋಪ್ಲ್ಯಾಸ್ಟಿ, ಆಂಜಿಯೋಗ್ರಾಮ್, ಕ್ಯಾಥ್‌ಲ್ಯಾಬ್, ಹೃದಯ ಬಡಿತದ ಸಮಸ್ಯೆಯ ಚಿಕಿತ್ಸೆ, ಎದೆಗೊಡಿನ ಶಸ್ತ್ರಚಿಕಿತ್ಸೆ, ಹೃದಯ ಆರೋಗ್ಯ ತಪಾಸಣೆಯ ಸೌಲಭ್ಯಗಳಿಗೆ ದಿನದ 24 ಗಂಟೆಗಳು ಚಿಕಿತ್ಸೆ ಸೌಲಭ್ಯಗಳು ಸಿಗಲಿದೆ ಎಂದು ಹೇಳಿದರು.

ಇವುಗಳಿಗೆ ಯಶಸ್ವಿನಿ, ವಾಜಪೇಯಿ ಆರೋಗ್ಯ ಶ್ರೀ, ರಾಜೀವ್ ಆರೋಗ್ಯ ಭಾಗ್ಯ, ಜ್ಯೋತಿ ಸಂಜೀವಿನಿ, ರಾಷ್ಟ್ರೀಯ ಬಾಲಸ್ವಾಸ್ಥ್ಯ ಕಾರ್ಯಕ್ರಮ, ಭಾರತ್ ಸಂಚಾರ್ ನಿಗಮ್ ಲಿಮಿಟೆಡ್, ಸೌತ್ ವೆಸ್ಟ್ರನ್ ರೈಲ್ವೆ ಸೇರಿದಂತೆ ಎಲ್ಲಾ ಪ್ರಮುಖ ಆರೋಗ್ಯ ವಿಮೆ ಯೋಜನೆಗಳ ಸೌಲಭ್ಯಗಳನ್ನು ಪುನಾರಂಭಿಸಲಾಗಿದೆ ಎಂದು ಮಾಹಿತಿ ನೀಡಿದರು.

ಬಿಪಿಎಲ್ ಚಿಡಿತರ ಚೀಟಿ ಫಲಾನುಭವಿಗಳಿಗೆ ಕೆಲವು ಚಿಕಿತ್ಸೆಗಳು ಉಚಿತವಾಗಿ ದೊರೆಯುತ್ತವೆ. ಉಳಿದಂತೆ ಕೆಲವು ಯೋಜನೆಗಳಿಗೆ ಶೇಕಡುವಾರು ಮಾತ್ರ ಹಣವನ್ನು ಪಾವತಿಸ ಬೇಕಾಗುತ್ತದೆ. ಎಲ್ಕ್ಟ್ರೋ ಪ್ರಕ್ಯೋ ಫಿಸಿಯಾಲಜಿ ನೂತನವಾದ ಅವಿಷ್ಕಾರವನ್ನು ಸಾಧಿಸಿದ್ದು, ಹೃದಯ ಬಡಿತದ ವ್ಯತ್ಯಾಸ ವನ್ನು ಸರಿಪಡಿಸುವ ವಿಧಾನವನ್ನು ಕೋಲಾರದ ಶಾಖೆಯಲ್ಲೂ ಆರಂಭಿಸ ಲಾಗುವುದು ಎಂದು ಹೇಳಿದರು.

ಮಾನಸಿಕ ಒತ್ತಡಗಳು, ಧೂಮಪಾನ, ಮದ್ಯಪಾನ ಕೆಟ್ಟ ಹವ್ಯಾಸಗಳು ಸಹ ಹೃದಯ ಸಂಬಂಧಿ ಕಾಯಿಲೆಗಳಿಗೆ ಕಾರಣವಾಗಿದೆ. ಶ್ರಮವಹಿಸುವ ಕೆಲಸಗಳು ಕಡಿಮೆ ಯಾಗಿರುವುದರಿಂದ ದೈಹಿಕವಾಗಿ ವ್ಯಾಯಮವಿಲ್ಲದೆ ಅನೇಕ ರೋಗಗಳಿಗೆ ಅವಕಾಶ ಮಾಡಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವೈದ್ಯ ಡಾ.ಮುರಳಿಬಾಬು, ಡಾ.ಕೆ.ಸಿ.ಪ್ರಿಯನ್, ಸಾರ್ವಜನಿಕ ಸಂಪರ್ಕ ಅಧಿಕಾರಿ ವಿಶಾಲ್ ಹಾಜರಿದ್ದರು.